ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಸಾಶನ

೧೨೫೪. ಶ್ರೀ ಬಿ. ಜಿ. ಕೊಟ್ಟಪ್ಪ (ಹರಿಹರ) .—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡುವ ಮಾಸಾಶನದಲ್ಲಿ ವ್ಯತ್ಯಾಸವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರದವತಿ ಕ್ರಮ ಕೈಗೊಳ್ಳುವರೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು) .—

ಅ) ಹೌದು

ಆ) ದಿನಾಂಕ ೪-೯-೮೨ರ ಪೂರ್ವದಲ್ಲಿ ಪಂಜೂರು ತಿಂಗಳಿಗಿಂತ ಕಡಿಮೆ ಇಲ್ಲದೆ ಶಿಕ್ಷೆ ಅನುಭವಿಸಿರುವ ಹಾಗೂ ರೂ. ೨೪೦೦ಕ್ಕಿಂತ ಕಡಿಮೆ ವಾರ್ಷಿಕ ವರಮಾನವಿರುವ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾತ್ರ ರಾಜ್ಯ ಗೌರವಧನ ಮಂಜೂರು ಮಾಡಲಾಗುತ್ತಿತ್ತು. ಇಂತಹವರಿಗೆ ಮಾತ್ರ ರಾಜ್ಯ ಗೌರವಧನ ತಿಂಗಳಿಗೆ ರೂ. ೧೫೦ರಂತೆ ಕೊಡಲಾಗುತ್ತಿದೆ. ಆದರೆ ೩ ತಿಂಗಳಿನ ಕಾರಾಗೃಹವಾಸದ ಮಿತಿ ಹಾಗೂ ವಾರ್ಷಿಕ ವರಮಾನದ ಮಿತಿಯನ್ನು ಅನುಕ್ರಮವಾಗಿ ದಿನಾಂಕ ೪-೯-೮೨ ಮತ್ತು ೨೨-೧೧-೮೧ ರಿಂದ ತೆಗೆದುಹಾಕಿ ನಿಯಮಗಳನ್ನು ಸಡಿಲಗೊಳಿಸಲಾಯಿತು. ಆಂ ದಿನಿಂದ ಮಂಜೂರಾದವರಿಗೆ ಮಾತ್ರ ಮಾಸಿಕ ಗೌರವಧನ ರೂ. ೧೦೦ ರಂತೆ ಕೊಡಲಾಗುತ್ತಿದೆ. ವ್ಯಕ್ತಿಗಳು ಬೇರೆಯ ವರ್ಗಗಳಿಗೆ ಸೇರಿದವರಾದಂದರಿಂದ ಇದು ತಾರತಮ್ಯ ಅಲ್ಲ.

ಎಲ್ಲಾ ಸ್ವಾತಂತ್ರ್ಯ ಯೋಧರಿಗೂ ಒಂದೇ ಮೊಬಲಗನ್ನು ಮಾಸಾಶನವಾಗಿ ಕೊಡಬೇಕೇ ಎಂಬ ವಿಷಯವನ್ನು ಸರ್ಕಾರ ಪರಿಶೀಲಿಸುತ್ತಿದೆ.

ಶ್ರೀ ಬಿ.ಜಿ. ಕೊಟ್ರಪ್ಪ.—ಮಾನ್ಯ ಅಧ್ಯಕ್ಷರೆ, ಇನ್ನೆರಡು ವರ್ಷ ಕಳೆದರೆ ಸ್ವಾತಂತ್ರ್ಯ ಯೋಧರು ಜೀವಂತ ಶವವಾಗಿ ಆ ಒಂದು ಜನಾಂಗ ಕಡಿಮೆಯಾಗುತ್ತಾ ಹೋಗುತ್ತದೆ. ಅವರಿಗೆ ತಿಂಗಳಿಗೆ ಕೊಡುವ ಮಾಶಾಸನ ೧೫೦ ರೂಪಾಯಿ ಸೀಮಿತವಾಗಿದೆ. ಅದೇ ರೀತಿ ಕೆಲವರು ಮಾಶಾಸನವನ್ನು ೧೦೦ ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ. ಒಬ್ಬೊಬ್ಬರಿಗೆ ೧೦೦ ಮತ್ತೊಬ್ಬರಿಗೆ ೧೫೦ ಈ ರೀತಿಯ ವ್ಯತ್ಯಾಸ ಮಾಡುವುದು ಸರಿಯಲ್ಲ. ಕೇಂದ್ರ ಸರ್ಕಾರ ತಿಂಗಳಿಗೆ ೫೦೦ ರೂಪಾಯಿಗಳನ್ನು ಸ್ವಾತಂತ್ರ್ಯಯೋಧರಿಗೆ ಕೊಡಲಿಕ್ಕೆ 'ಕಾಂಗ್ರೆಸ್ ಶತಮಾನೋತ್ಸವ ಸಮಾರಂಭ'ದಲ್ಲಿ ತೀರ್ಮಾನ ಕೈಗೊಂಡಿದೆ. ಅದೇರೀತಿ ನಮ್ಮ ಸರ್ಕಾರ ಕೂಡ ಅಕ್ಟೋಬರ್ ೨ನೇ ತಾರೀಖಿನಿಂದ ಸ್ವಾತಂತ್ರ್ಯಯೋಧರಿಗೆ ತಿಂಗಳಿಗೆ ೨೫೦ ರೂಪಾಯಿಗಳನ್ನು ಮಾಶಾಸನ ಕೊಡಲಿಕ್ಕೆ ಶೀಘ್ರ ಪರಿಶೀಲನೆ ನಡೆಸಿ, ಆ ರೀತಿ ಸರ್ಕಾರ ಮಾಡುತ್ತದೆಯೇ ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಶೀಘ್ರವಾಗಿ ಪರಿಶೀಲನೆ ಮಾಡಿ ೧೫೦ ರೂಪಾಯಿ ಮಾಶಾಸನ ಕೊಡುವ ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

ಶ್ರೀ ಸಂಗಮೇಶ್ವರ ಕೃಪಾ ನಾಟ್ಯ ಸಂಘಕ್ಕೆ ಸಹಾಯಧನ

೧೨೭೭. ಶ್ರೀ ಅಮರನಾಥಶೆಟ್ಟಿ (ಮೂಡಬಿದರೆ) ಹಾಗೂ ಶ್ರೀ ಚಂದ್ರಶೇಖರ್ (ಗೌರಿಬಿದನೂರು).—ಮಾನ್ಯ ವಾರ್ತಾ, ಯುವಜನಸೇವಾ, ಕ್ರೀಡಾಂಗಣ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಅನೇಕ ನಾಟಕ ಕಂಪನಿಗಳಿಗೆ ಸಹಾಯಧನ ನೀಡುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅಂತಹ ಕಂಪನಿಗಳ ಪಟ್ಟಿ, ಸಹಾಯಧನ ಮಂಜೂರು ಮಾಡಿದ ಕಂಪನಿಗಳ ಹೆಸರೇನು ?

ಇ) ಸಮಾಜಕ್ಕೆ ಉತ್ತಮ ನಾಟಕಗಳನ್ನು ಅರ್ಪಿಸುತ್ತಿರುವ ಶ್ರೀ ಸಂಗಮೇಶ್ವರ ಕೃಪಾ ನಾಟ್ಯ ಸಂಘ ದೊಡ್ಡವಾಡ, ಬೆಳಗಾಂ ಜಿಲ್ಲೆ ಕಂಪನಿಯು ಯಾವುದೇ ಸಹಾಯಧನ ಪಡೆಯದಿರುವುದು ನಿಜವೆ?

ಈ) ಪ್ರಸಕ್ತ ಸಾಲಿನಲ್ಲಿ ಈ ನಾಟ್ಯ ಕಂಪನಿಗೆ ಸಹಾಯಧನ ಮಂಜೂರು ಮಾಡಲಾಗುವುದೇ ?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನಸೇವಾ ರಾಜ್ಯ ಸಚಿವರು).—

ಅ) ಹೌದು.

ಆ)

೧.	ಶ್ರೀ ಗುಬ್ಬಿ ಚೆನ್ನಬಸವೇಶ್ವರಸ್ವಾಮಿ ಥಿಯೇಟರ್ ಕಂಪನಿ	ರೂ. ೧,೦೦,೦೦೦–೦೦
೨.	ಶ್ರೀ ಇಡುಗಂಜಿ ಮಹಾಗಣಪತಿ ಯಕ್ಷಗಾನ ಮಂಡಲಿ	೨೫,೦೦೦–೦೦
೩.	ಶ್ರೀ ವಿರೇಶ್ವರ ನಾಟ್ಯ ಸಂಘ	೫೦,೦೦೦–೦೦
೪.	ಶ್ರೀ ಗುರು ಜಿ.ಬಿ.ಆರ್. ಡ್ರಾಮಾ ಕಂಪನಿ	೫೦,೦೦೦–೦೦
೫.	ಶ್ರೀ ಶಾರದ ಸಂಗೀತ ನಾಟಕ ಮಂಡಲಿ	೫೦,೦೦೦–೦೦
೬.	ಶ್ರೀ ಕಲಾವೈಭವ ನಾಟ್ಯ ಸಂಘ	೫೦,೦೦೦–೦೦

ಇ) ನಿಜ.

ಈ) ಸದರಿ ಕಂಪನಿಯು ಈಗ ಮನವಿ ಸಲ್ಲಿಸಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಸಹಾಯಧನ ನೀಡಲು ಪರಿಶೀಲಿಸಲ್ಪಡುತ್ತಿದೆ.

ಶ್ರೀ ಚಂದ್ರಶೇಖರ್..—ಇನ್ನೂ ಕೆಲವು ಅರ್ಜಿಗಳು ಬಂದಿವೆ. ಸ್ತ್ರೀ ನಾಟಕ ಮಂಡಲಿಗೆ ಎಷ್ಟು ಸಹಾಯಧನ ಕೊಟ್ಟಿದ್ದಾರೋ ಗೊತ್ತಿಲ್ಲ. ಅದರ ವಿವರಗಳನ್ನು ತಿಳಿಸಬೇಕು. ಪಂಪ್ತ ಸಂಗಮೇಶ್ವರ ಕೃಪಾ ನಾಟ್ಯ ಸಂಘ, ದೊಡ್ಡವಾಡ, ಬೆಳಗಾಂ ಜಿಲ್ಲೆ ಇವರು ೧೯೫೨ರಿಂದಲೂ ನಾಟಕಗಳನ್ನು ಆಡಿಕೊಂಡು ಬರುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ಪೂರ್ತಿ ಆ ಸೆಟ್ಟು ಸುಟ್ಟು ಹೋಯಿತು. ಅದಕ್ಕಾಗಿ ಪರಿಹಾರವನ್ನು ಕೊಡುವ ಸಲುವಾಗಿ ೩–೪ ಅರ್ಜಿಗಳನ್ನು ಕೊಟ್ಟಿದ್ದಾರೆ. ಕಲಾವಿದರು ಸಾಕಷ್ಟು ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಈಗ ಅವರು ಮಹಾಲಿಂಗಪುರದಲ್ಲಿ ನಾಟಕವನ್ನು ಆಡುತ್ತಿದ್ದಾರೆ. ಅದಕ್ಕೂ ಪರಿಹಾರವನ್ನು ಕೊಡುವ ಬಗ್ಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೀವರಾಜ ಆಳ್ವ.—ಬೆಂಕಿ ಅನಾಹುತದ ಬಗ್ಗೆ ಸರ್ಕಾರದ ಗಮನಕ್ಕೆ ಈಗ ತಂದಿದ್ದಾರೆ. ಅವರಿಗೆ ಬರುವ ವರ್ಷದಲ್ಲಿ ಹೆಚ್ಚು ಸಹಾಯಧನವನ್ನು ಕೊಡುವುದಕ್ಕೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಎಚ್. ಪಾಟೀಲ್.—ಬಯಲುನಾಟಕ ಆಡತಕ್ಕಂತಹವರಿಗೆ ಯಾವ ರೀತಿಯ ಸಹಾಯ ಧನವನ್ನು ಕೊಡುವುದಕ್ಕೆ ಸರ್ಕಾರ ವಿಚಾರ ಮಾಡಿದೆ? ಒಂದು ವೇಳೆ ಆ ಬಗ್ಗೆ ವಿಚಾರ ಮಾಡದಿದ್ದರೆ ಎಷ್ಟರವಟ್ಟಿಗೆ ಕೊಡಬಹುದೆಂಬುದರ ಬಗ್ಗೆ ವಿಚಾರ ಮಾಡುತ್ತೀರಾ ?

ಶ್ರೀ ಜೀವರಾಜ ಆಳ್ವ.—ಜಾನಪದ ಹಾಗೂ ಬಯಲುನಾಟಕಕ್ಕೆ ಹೆಚ್ಚು ಪ್ರೋತ್ಸಾಹ ಧನವನ್ನು ಸರ್ಕಾರ ಕೊಡುತ್ತಿದೆ. ಅವರಿಗೂ ಸಹಾಯ ಧನವನ್ನು ಮುಂದುವರಿಸುವ ಬಗ್ಗೆ ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನವಂಗೆ ಗೊತ್ತಿದ್ದ ಹಾಗೆ ಗುಬ್ಬಿ ಕಂಪನಿ, ಸುಬ್ಬಯ್ಯನಾಯ್ಡು ಕಂಪನಿ ಬಹಳ ಹೆಸರುವಾಸಿಯಾಗಿದ್ದಂತಹ ನಾಟಕ ಕಂಪನಿಗಳು ವಿಶೇಷವಾಗಿ ಬೆಳಗಾಂ, ಬೀಜಾಪುರ, ಧಾರವಾಡ ಹಾಗೂ ಬಳ್ಳಾರಿ ಜಿಲ್ಲೆಯ ಸ್ವಲ್ಪಭಾಗ ಇಲ್ಲಿಂತೂ ಬಹಳ ಹೆಸರನ್ನು ಪಡೆದಿರುವಂತಹ ಕಂಪನಿಗಳಂ. ಅಲ್ಲಿ ಅನೇಕ ಜನ ಒಳ್ಳೊಳ್ಳೆ ಕಲಾವಿದರು ಇದ್ದಾರೆ. ಆದರೆ ಇವತ್ತು ಅವರು ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಅಂತಹವರಿಗೆ ಸಹಾಯ ಮಾಡುವ ಸಲುವಾಗಿ ವಿಶೇಷವಾದ ಯೋಜನೆ ಯನ್ನು ಹಾಕಿಕೊಳ್ಳುತ್ತೀರಾ ?

ಶ್ರೀ ಜೀವರಾಜ ಆಳ್ವ.—ವೃತ್ತಿ ನಾಟಕ ಸಂಸ್ಥೆಗಳು ಬಹಳಷ್ಟು ಇವೆ. ಅವುಗಳಂ ಉದ್ಧಾರ ವಾಗಬೇಕೆಂಬುದು ಸರ್ಕಾರದ ಗಮನದಲ್ಲಿದೆ. ಆದರೂ ಕೂಡ ಕಲಾವಿದರಿಗೆ ಮಾಶಾಸನವನ್ನು ಕಳೆದ ಮೂರಂ ವರ್ಷಗಳಿಂದಲೂ ಹಿಂದಿನ ಸಲ ಬಹಳ ಹೆಚ್ಚಿನ ರೀತಿಯಲ್ಲಿ ಮಾಶಾಸನವನ್ನು ಕೊಟ್ಟುಕೊಂಡು ಬಂದಿದೆ. ಈ ವೃತ್ತಿ ನಾಟಕ ಸಂಸ್ಥೆಗಳ ಬಗ್ಗೆ ಏನಂ ಮಾಡಬೇಕು, ಅವರಿಗೆ ಸಹಾಯಧನ ಕೊಡಬೇಕೆ?

ಎನ್ನುವುದರ ಬಗ್ಗೆ ನಾಟಕ ಅಕಾಡೆಮಿಯವರಿಗೆ ಆದೇಶವನ್ನು ನೀಡಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು ಕೊಟ್ಟಂತಹ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಇನ್ನೂ ಹೆಚ್ಚಿನ ಸಹಾಯ ವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಸರ್ಕಾರ ಮಹಿಳೆಯರಿಗೆ ಎಲ್ಲ ಕ್ಷೇತ್ರದಲ್ಲೂ ಸಾಕಷ್ಟು ಮಿಸಲಾತಿ ಯನ್ನು ಇಡಬೇಕೆಂದು ತೀರ್ಮಾನ ಮಾಡಿದ್ದು ಆ ರೀತಿ ಅವರಿಗೆ ಪ್ರೋತ್ಸಾಹವನ್ನು ಕೊಡುತ್ತಿದೆ. ಇದೇ ರೀತಿ ಇಲಾಖೆಯಲ್ಲಿ ಮಹಿಳಾ ಸ್ತ್ರೀ ನಾಟಕ ಮಂಡಲಿಗೆ, ಅವರಿಗೋಸ್ಕರ ಮಿಸಲಾತಿಯನ್ನು ಮಾಡುವಂತಹ ಏನಾದರೊಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಜೀವರಾಜ ಆಳ್ವ.—ಶ್ರೀಮತಿ ನಾಗರತ್ನಮ್ಮನವರು ಆ ಮಹಿಳಾ ನಾಟಕ ಕಂಪನಿಯ ವೇಲ್ಫೇರ್ ಕಾರಕರು. ಅವರು ಸ್ವಲ್ಪ ಕಷ್ಟದಲ್ಲಿದ್ದಾರೆಂಬ ವಿಷಯ ತಿಳಿದು ಸಹಾಯಧನವನ್ನು ಕೊಟ್ಟಿದ್ದೇವೆ. ಅವರು ಸತತವಾಗಿ ೨೫ ವರ್ಷಗಳ ಕಾಲ ಈ ಒಂದು ರಂಗದಲ್ಲಿ ಕೆಲಸ ಮಾಡಿದ್ದಾರೆ, ಅವರಿಗೆ ಕೊಟ್ಟಿರುವಂತಹ ಸಹಾಯಧನ ಇನ್ನೂ ಜಾಸ್ತಿಯಾಗಬೇಕೆಂಬ ಮನವಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ಇನ್ನೂ ಹೆಚ್ಚಿನ ಸಹಾಯಧನವನ್ನು ಈ ಸ್ತ್ರೀ ನಾಟಕ ಮಂಡಲಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಈ ರೀತಿಯ ಸಹಾಯಧನವನ್ನು ಕೊಡುವಾಗ ಯಾವುದಾದರು ಸ್ಪಷ್ಟವಾದ ನೀತಿಯನ್ನು ಸರ್ಕಾರ ಅನುಸರಿಸುತ್ತಿದೆಯೇ? ಹಾಗಿದ್ದರೆ ಆ ನೀತಿ ಏನು? ಎರಡನೆಯದಾಗಿ ಹೊಸದಾಗಿ ನಾಟಕ ಸಂಘವನ್ನು ಸ್ಥಾಪನೆ ಮಾಡಿ, ಆಸಕ್ತ ಕಲಾವಿದರಿಗೆ ಪರಿಹಾರವನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಯಾರಾದರೂ ಮಾಡುವುದಕ್ಕೆ ಮುಂದೆ ಬಂದರೆ ಅವರಿಗೂ ಸರ್ಕಾರ ಪ್ರೋತ್ಸಾಹ ಕೊಡತಕ್ಕಂತಹ ಕಾರ್ಯಕ್ರಮ ಏನಾದರೂ ಇದೆಯೇ ? ಮೂರನೆಯದಾಗಿ, ಹವ್ಯಾಸಿ ಕಲಾವಿದರು ಏನಿದ್ದಾರೆ, ಅವರು ಇತ್ತೀಚಿನ ದಿವಸಗಳಲ್ಲಿ ಒಳ್ಳೆಳ್ಳೆ ನಾಟಕಗಳನ್ನು ಆಡುತ್ತಿದ್ದಾರೆ. ಅವರಿಗೂ ಸಹಾಯಧನವನ್ನು ಕೊಡತಕ್ಕಂತಹ ವ್ಯವಸ್ಥೆ ಏನಾದರೂ ಇದೆಯೇ ? ಒಂದು ವೇಳೆ ಆ ರೀತಿ ಇಲ್ಲದಿದ್ದರೆ, ಆ ಬಗ್ಗೆ ಮಾನ್ಯ ಮಂತ್ರಿಗಳು ಯೋಜನೆ ಮಾಡುತ್ತಾರೆಯೇ ?

ಶ್ರೀ ಜೀವರಾಜ್ ಆಳ್ವ.—ಬೆಂಗಳೂರು ನಗರದಲ್ಲಿ ಹಾಗೂ ಕರ್ನಾಟಕ ರಾಜ್ಯದಲ್ಲಿ ಹಲವಾರು ಹವ್ಯಾಸಿ ನಾಟಕ ಸಂಸ್ಥೆಗಳು ಇವೆ. ಈ ರೀತಿಯ ಹವ್ಯಾಸಿ ನಾಟಕ ಸಂಸ್ಥೆಗಳಿಗೂ ಪ್ರೋತ್ಸಾಹ ಕೊಡತಕ್ಕಂತಹ ಉದ್ದೇಶವನ್ನು ಇಟ್ಟುಕೊಂಡಿದ್ದು, ಅವರು ಯಾವುದಾದರೂ ನಾಟಕ ಆಡಬೇಕು ಅಂದಾಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಸ್ಪಾನ್ಸರ್ ಮಾಡುವಂತಹ ಕಾರ್ಯಕ್ರಮವನ್ನಿಟ್ಟುಕೊಂಡಿದ್ದೇವೆ. ಒಂದು ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾಗಿದೆ. ಕಳೆದ ೨ ವರ್ಷಗಳ ಹಿಂದೆ ಸುಮಾರು ೩ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡಿದ್ದರೆ ಈಗ ೨೫ ಲಕ್ಷ ರೂಪಾಯಿ ಗಳನ್ನು ವಿಚರ್ಚ ಮಾಡುತ್ತಿದ್ದೇವೆ.. ಸರಿಯಾದ ಆಂಕಿ ಅಂಶಗಳು ನನ್ನಲ್ಲಿಲ್ಲ, ಆದರೂ ನೆನಪಿನಲ್ಲಿರು ವುದನ್ನು ಹೇಳುತ್ತಿದ್ದೇನೆ. ಅಂದರೆ ೧೦ ಪಾಲು ಜಾಸ್ತಿ ಕೊಡುತ್ತಿದ್ದೇವೆ. ಇದನ್ನು ತಿಳಿಸಲು ನಾನು ಸಂತೋಷಪಡುತ್ತೇನೆ.

ಶ್ರೀ ಚಂದ್ರಶೇಖರ್.—ಇಲ್ಲಿ ತೋರಿಸಿರತಕ್ಕ ೬ ಕಂಪನಿಗಳಿಗೆ ಬೇರೆ ಬೇರೆ ರೀತಿಯಲ್ಲಿ ಸಹಾಯಧನವನ್ನು ಕೊಟ್ಟಿದ್ದಾರೆ. ಅದನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ ? ಇದಕ್ಕೆ ಸಾಮಾನ್ಯವಾಗಿ ಇತರಕ್ಕೆ ಆಧಾರ ಯಾವುದು ? ಏಕೆಂದರೆ ಒಂದು ಕಂಪನಿಗೆ ೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ಮತ್ತೊಂದು ಕಂಪನಿಗೆ ೨೫ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈ ರೀತಿ ಕೊಡ ಬೇಕಾದರೆ ಏನು ಆಳತೆಗೋಲನ್ನು ಇಟ್ಟುಕೊಂಡಿದ್ದೀರಿ ? ಇದರ ಜೊತೆಗೆ ಹವ್ಯಾಸಿ ರಂಗಭೂಮಿ ಕಲಾವಿದರಿಗೆ ಎಷ್ಟು ಕೊಟ್ಟಿದ್ದೀರೆಂಬುದಕ್ಕೆ ವಿವರಗಳು ಬೇಕು. ಅದನ್ನು ಒದಗಿಸಿಕೊಡುತ್ತೀರಾ ?

ಶ್ರೀ ಜೀವರಾಜ್ ಆಳ್ವ.—ಅದಕ್ಕೆ ರೂಪರೇಷೆ ಸರಿಯಾಗಿ ಇಟ್ಟಿಲ್ಲ. ಆದರೆ ಹಲವಾರು ವರ್ಷ ಗಳಿಂದ ೧೦ ವರ್ಷಗಳಿಂದ ಈಚೆಗೆ ಕೊಟ್ಟಂತಹ ಸಹಾಯಧನವನ್ನು ಪಟ್ಟಿಮಾಡಿ ನಾನು ಮಾನ್ಯ ಸದಸ್ಯ ರಿಗೆ ಒದಗಿಸಿದ್ದೇನೆ. ಹವ್ಯಾಸಿ ರಂಗಭೂಮಿ ಕಲಾವಿದರಿಗೆ ಕೊಟ್ಟಿರುವಂತಹ ಸಹಾಯಧನದ ಬಗ್ಗೆ ಕೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತಹ ಮಾಹಿತಿಯನ್ನು ತರಿಸಿ ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಚ್.ಟಿ. ಕೃಷ್ಣಪ್ಪ,—ನಾನು ಕೇಳಿದಂತಹ ಮೂರು ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರವನ್ನೇ ಹೇಳಲಿಲ್ಲ.

ಶ್ರೀ ಜೀವರಾಜ್ ಆಳ್ವ.—ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವ ವಿಷಯವೇನೆಂದರೆ ಹವ್ಯಾಸಿ ನಾಟಕ ಸಂಸ್ಥೆಗಳಾಗಲೀ, ವೃತ್ತಿಪರ ನಾಟಕ ಸಂಸ್ಥೆಗಳಾಗಲೀ, ಇವುಗಳ ಬಗ್ಗೆ ನಮ್ಮ ಜನತಾ ಸರ್ಕಾರ ಒಂದೂ ನಿರ್ಣಯವನ್ನು ತೆಗೆದುಕೊಂಡಿದೆ. ಅದು ಏನೆಂದರೆ, ಈ ರೀತಿಯ ಯಾವುದೇ ಸಂಸ್ಥೆಗಳಾಗಲೀ ಯಾವುದೇ ಬೇಡಿಕೆ ಬಂದಾಗಲೂ ಇಲ್ಲ ಅಂತ ಹೇಳುವುದಿಲ್ಲ. ಅದನ್ನು ಕಳೆದ ಎರಡು ವರ್ಷಗಳಿಂದ ನಡೆಸಿಕೊಂಡು ಬಂದಿದ್ದೇವೆ. ಇನ್ನು ಮುಂದೆಯೂ ನಡೆಸಿಕೊಂಡು ಹೋಗುತ್ತೇವೆ.

ಯೋಜನೆ ಮತ್ತು ಯೋಜನೆ, ತರದ ವೆಚ್ಚ.

೧೨೪೯. ಶ್ರೀ ಮೊಹಮದ್ ಮೊಯಿನುದ್ದೀನ್ (ಚಾಮರಾಜಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರಸ್ತುತ ರಾಜ್ಯದ ಬಿಗಿ ಆರ್ಥಿಕ ಪರಿಸ್ಥಿತಿಯಲ್ಲಿ ಸರಕಾರವು ಅನುತ್ಪಾದಕ ವೆಚ್ಚವನ್ನು ಕಡಿಮೆ ಮಾಡುವುದಕ್ಕೆ ತೆಗೆದುಕೊಂಡ ಮಿತವ್ಯಯ ಕ್ರಮಗಳು.

ಆ) ಯೋಜನೇತರ ವೆಚ್ಚವು ಬೆಳೆಯದಂತೆ ನಿಯಂತ್ರಿಸಲು ತೆಗೆದುಕೊಂಡ ಮಿತವ್ಯಯ ಕ್ರಮಗಳು.

ಇ) ಯೋಜನಾ ವೆಚ್ಚವು ಉತ್ತಮ ರೀತಿಯಲ್ಲಿ ಬೆಳೆಯಲು ತೆಗೆದುಕೊಂಡ ಕ್ರಮಗಳು.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿ).—

ಅ) ಮತ್ತು (ಆ) ಸರಕಾರವು ತೆಗೆದುಕೊಂಡಿರುವ ಮಿತವ್ಯಯ ಕ್ರಮಗಳು ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಿಕೊಂಡೂ ಖರ್ಚಿನಲ್ಲಿ ಮಿತವ್ಯಯವನ್ನು ಸಾಧಿಸುವ ಗುರಿ ಹೊಂದಿವೆ. ಈ ಕ್ರಮಗಳು ಹವಾಸಿಯಂತ್ರಣ ಯಂತ್ರಗಳು ಇಂಟರ್‌ಕಾಂ ಮುಂತಾದ ಬಿಲೆ ಬಾಳುವ ಸಾಮಗ್ರಿಗಳ ಮೇಲಿನ ಖರ್ಚನ್ನು ಕಡಿತ ಗೊಳಿಸುವುದು ಹೊಸ ಹುದ್ದೆಯ ಸೃಷ್ಟೀಕರಣ ಮಾಡದಿರುವುದು ಯೋಜನಾ ಹುದ್ದೆಗಳನ್ನು ಸೃಷಿಸಲು ಸ್ಟಾಫ್ ಸ್ಕ್ರೀನಿಂಗ್ ಕಮಿಟಿಯ ಪೂರ್ವಬಾವಿ ಪರಿಶೀಲನೆಗೆ ಒಳಪಡಿಸುವುದು ಮತ್ತು ವಾಹನಗಳ ಖರೀದಿಗೆ ಅನುಮತಿ ಕೊಡದಿರುವುದು ಇವುಗಳನ್ನು ಗುರಿಯಾಗಿ ಹೊಂದಿದೆ.

ಇ) ಯೋಜನೇತರ ಬಾಬಿನಲ್ಲಿ ಖರ್ಚನ್ನು ಕಡಿತಗೊಳಿಸುವುದರೊಂದಿಗೆ, ಈ ಮೇಲಿನ ಕ್ರಮಗಳು ಯೋಜನಾ ವೆಚ್ಚಕ್ಕೆ ಹೆಚ್ಚು ಸಂಪನ್ಮೂಲಗಳು ದೊರಕುವಂತೆ ಮಾಡುತ್ತವೆ.

ಶ್ರೀ ಸಿ. ಎಂ. ಉದಾಸಿ (ಶ್ರೀ ಮೊಯಿನುದ್ದೀನ್ ಅವರ ಪರವಾಗಿ).—ಹೊಸ ವಾಹನಗಳನ್ನು ಖರೀದಿ ಮಾಡುವುದನ್ನು ಬಂದ್ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಹಳೇ ವಾಹನಗಳಿಗೆ ೩ ವರ್ಷಗಳಲ್ಲಿ ಒಂದೊಂದು ಜೀಪಿಗೆ ೯೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ ಉದಾಹರಣೆಗಳು ಇವೆ. ಹೊಸ ವಾಹನಗಳನ್ನು ಕೊಳ್ಳದೆ ಹಳೇ ವಾಹನಗಳಿಗೆ, ವಾಹನದ ಬೆಲೆಗಿಂತ ಹೆಚ್ಚು ಹಣ ಖರ್ಚು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ಹೇಳಿದರೆ ಆಲೋಚಿಸುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಮಿತವ್ಯಯ ನೀತಿಯನ್ನು ತಾವು ಅನುಸರಿಸಿದ್ದೀರಿ. ಸಂಪನ್ಮೂಲ ಗಳನ್ನು ಹುಡುಕುವುದಕ್ಕೋಸ್ಕರ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಅನ್ನು ಕಡಿಮೆ ಮಾಡಿದ್ದೇವೆಂದು ಹೇಳಿ ವಾಹನ ಖರೀದಿ ಮಾಡದೆ ಇರತಕ್ಕದ್ದಕ್ಕೆ ಇಂಟರ್‌ಕಾಂ ಇತ್ಯಾದಿ ಉದಾರಹಣೆ ಕೊಟ್ಟಿದ್ದೀರಿ. ಟಿ. ಎ. ಡಿ ಎ ಕೊಡತಕ್ಕದ್ದು, ಸರ್ಕಾರೀ ನೌಕರರು ವರ್ಗವಾಗಿ ಹೋದಾಗ ಕೊಡತಕ್ಕ ಹಣ, ಇತ್ಯಾದಿ ಎಲ್ಲ ಇದೆ. ಸುಮ್ಮಸುಮ್ಮನೆ ವರ್ಗ ಮಾಡಬಾರದೆಂದು ಸರ್ಕಾರಿ ಆಜ್ಞೆ ಹೊರಡಿಸಿದ ಮೇಲೆ ಸಿಕ್ಕಾಪಟ್ಟೆ ವರ್ಗಾವಣೆಗಳು ನಡೆದಿವೆ. ಲಕ್ಷಾಂತರ ರೂಪಾಯಿ ಹಣವನ್ನು ವರ್ಗವಾದ ಅಧಿಕಾರಿಗಳಿಗೆ ಕೊಡುವುದರಿಂದ ಹಣ ಖರ್ಚಾಗಿಲ್ಲವೆ ? ಅದು ಇಕಾನಮಿ ಆರ್ಡರಿಗೆ ವಿರೋಧವಾಗಿಲ್ಲವೆ ? ಯೋಜನಾ